# ಶ್ರೀ ರ ಘೂ ತ್ತ ಮ ತೀ ರ್ಥಾ ಯ ನ ಮಃ

Contributed by Sri B.Ramanatha Bangalore



ಭಾವಬೋಧ ಕೃತಂ ಸೇವೆ ರಘೂತ್ತಮ ಮಹಾಗುರುಂ ।
ಯತ್ ಶಿಷ್ಯ ಶೀಷ್ಯ ಶೀಷ್ಯಾದ್ಯಾಃ ಟಿಪ್ಪಣ್ಯಾಚಾರ್ಯ ಸಂಜ್ಞಿತಾ ॥

ಯಾರ ಶಿಷ್ಯ, ಪ್ರಶಿಷ್ಯರೇ ಮೊದಲಾದವರೂ ಕೂಡ ಟಿಪ್ಪಣಾ-ಚಾರ್ಯರೆಂದು ಪ್ರಸಿದ್ಧರಾಗಿರುವರೊ ಅಂತಹ ಮಹಾಮಹಿಮರಾದ, ಭಾವಬೋಧ ಟಿಪ್ಪಣಿಗಳನ್ನು ರಚಿಸಿರುವ, ರಘೂತ್ತಮತೀರ್ಥರನ್ನು ಆಶ್ರಯಿಸುತ್ತೇನೆ.

ಪ್ರಣಮತ್ಕಾಮಧೇನೂಂ ಚ ಭಜತ್ಸುರತರೂಪಮಮ್ ।
ಶ್ರೀ ಭಾವಬೋಧ ಕೃತ್ಪಾದ ಚಿಂತಾಮಣಿಮುಪಾಸ್ಮಹೇ ॥

ನಮಿಸುವವರಿಗೆ ಕಾಮಧೇನುಗಳಾದ, ಭಜಿಸುವವರಿಗೆ ಕಲ್ಪವೃಕ್ಷ-ರಾದ, ಆಚಾರ್ಯ ಭಾವನೆಗಳನ್ನು ತಿಳಿದು ವಿಶದವಾದ ಟಿಪ್ಪಣಿಗಳನ್ನು ರಚಿಸಿದ, ಚಿಂತಾಮಣಿಯಂತಿರುವ, ರಘೂತ್ತಮತೀರ್ಥರನ್ನು ಉಪಾಸಿಸುವೆ.

( ಆ ರಾ ಧ ನೆ : ಪು ಷ್ಯ ಮಾ ಸ ಶು ಕ್ಲ ಪ ಕ್ಷ ದ್ವಾ ದ ಶಿ )

ರಾ ಗ – ಭೈ ರ ವಿ  :  ತಾ ಳ – ಅ ಟ ತಾ ಳ

ನೋಡಿದೆ । ಗುರುಗಳ ನೋಡಿದೆ । ಪ ।

ನೋಡಿದೆನು ಗುರುಗಳ ಪದಾಬ್ಜವ । ಪಾಡಿದೆನು ತನ್ಮಹಿಮೆಗಳ ನಾ
ಬೇಡಿದೆನು ಮನದಣಿಯೆ ವರಗಳ ಈಡು ಇಲ್ಲದೆ ಕೊಡುವ ಪ್ರಭುಗಳ । ಅ ಪ ।

ಪಂಚಕೃಷ್ಣಾರಣ್ಯಕ್ಷೇತ್ರ ಪಿನಾಕಿನಿಯ ತೀರದಲಿ ನಿಂತು ।
ಮಿಂಚುತಿಹ ಕಾಷಾಯದಂಡಕಮಂಡಲವ ಧರಿಸುತ್ತ ಧರೆಯೊಳು ॥
ಪಂಚಬಾಣನ ಪಿತನ ಗುಣಗಳ ಅಂಚೆಯದೆ ಪೊಗುಳುತ್ತ ಹರುಷದಿ ।
ಸಂಚಿತಾಗಾಮಿಗಳ ಕಳೆದು ಪ್ರಪಂಚದಲಿ ಮೆರೆವಂಥ ಗುರುಗಳ । ೧ ।

ಅಲವಬೋಧರ ಭಾಷ್ಯಟೀಕಾಭಾವವನು ಸುಜನರಿಗೆ ಬೋಧಿಸಿ
ಕಲುಷಮತಗಿರಿ ಸಮುದಯಂಗಳ ಕುಲಿಶದಂದದಿ ಖಂಡಿಸುತಲಿ ॥
ಮೂಲರಾಮ ದಿಗ್ವಿಜಯರಾಮರ ಪಾದಕಮಲಕೆ ಭೃಂಗರೆನಿಸುತ ।
ಶೀಲಭಕ್ತಿ ವಿರಕ್ತಿ ಮತಿಗಳ ಪಾಲಿಸುವ ಯತಿಮೌಳಿರತುನವ । ೨ ।

ಕಾಮಧೇನು ಸುಕಲ್ಪತರು ಚಿಂತಾಮಣಿಯವ್ಪೋಲ್ ಕಾಮಿತಾರ್ಥವ ।
ಪ್ರೇಮದಲಿ ಬೀರುತ್ತ ಆಧ್ಯಾತ್ಮಾದಿ ತಾಪತ್ರಯವ ಕಳೆಯುವ ॥
ಸ್ವಾಮಿ ಶ್ರೀಹರಿ ಶ್ರೀದವಿಟ್ಠಲನ ದಾಸರಗ್ರಣಿಯೆನಿಸಿ ಮೆರೆಯುವ ।
ನೇಮದಿಂದಲಿ ಶ್ರೀರಘೂತ್ತಮ ಮೌನಿವರ್ಯರ ಕರುಣ ಬಯಸುತ । ೩ ।

ರಾ ಗ – ಹಿ ೦ ದೋ ಳ  :  ತಾ ಳ – ಆ ದಿ ತಾ ಳ

ಪಾಹಿ ರಘೂತ್ತಮ ಗುರುರಾಯ ವಿ
ದ್ಯಾಯು ಯಶಶ್ರೀ ವಿಜ್ಞಾನಪ್ರದಾಯ । ಪ ।

ಪಾಹಿ ಪ್ರಮೋದಾಗಮಾನಂದಿತಾಯ । ದಿಗಧಿಪಾಯ ।
ಗುಣಸಾಗರಾಯ । ಬುಧಗೇಯ । ಅಜೇಯ । ಅ ಪ ।

ರಘುವರ್ಯ ಪಾದಾಬ್ಜ ಮಧುಲಿಡ್ವರ ।
ಅಘಶೈಲ ಮಘವಾನನಘಧೀವರ ।
ನಿಗಮಾಗಮಾನಂತೋದಿತ ಭಾಸ್ಕರ ॥
ರಘುವರಾಬ್ಜ ಪದಯುಗಳೇಂದೀವರ
ನಿಗದಿತಾಶುಗಾಶಯ ನಿಶ್ರೇಯ ।೧।

ನತಕಲ್ಪದ್ರುಮ ಸಿದ್ಧ ನಿಕಶಾತ್ಮಜ ।
ಶಿತಿಕಂಠಯುತನೀತ ವಾತಾತ್ಮಜ ।
ಯತಿವರ್ಯಾನ್ವಿತ ತತ್ವಕ್ರತು ಋತ್ವಿಜ ॥
ಕ್ಷಿತ್ಯಮೃತಾಂಧಸಸತ್ರಮ ದಕ್ಷಿಣ ।
ಚಿತ್ರಜಾರಿಧುನಿ ನಿತ್ಯವಿಹಾರಿ ।೨।

ನಿರವದ್ಯ ಸುಖಭಾವಭೋದಾತ್ಮಕ ।
ಸಿರಿತಂದೆ ವೆಂಕಟೇಶವಿಟ್ಠಲಾರ್ಚಕ ।
ಸ್ಮರ ಸಂವತ್ಸರ ಪುಷ್ಯ ಶುಕ್ಲಾಧಿಕ ॥
ಸ್ವರ್ದಿನಾಭ್ರಪುರ ನಿರ್ಗಮನೋತ್ಸುಕ
ದುರ್ಗಮ ಭವ ಸಂಸರ್ಗವಿದಾರಕ ।೩।

sri Krishnarpanamastu